**ಕರ್ನಾಟಕವಿಧಾನ ಪರಿಷತ್ತು**

| | | | |
|---|---|---|---|
| 1 | **ಮಾನ್ಯ ಸದಸ್ಯರ ಹೆಸರು** | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 2 | **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 747 |
| 3 | **ಉತ್ತರಿಸ ಬೇಕಾದ ದಿನಾಂಕ** | : | 12.12.2025 |
| 4 | **ಉತ್ತರಿಸುವ ಸಚಿವರು** | : | ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಯಾವ್ಯಾವ ವಿಭಾಗಗಳಲ್ಲಿ ಕೆಲಸ ನಿರ್ವಹಿಸುವ ಎಷ್ಟು ಕಾರ್ಮಿಕರು ಕಾರ್ಮಿಕ ವಿಮಾ ಯೋಜನೆಗೆ ಒಳಪಡುತ್ತಿದ್ದಾರೆ: ವಾರ್ಷಿಕವಾಗಿ ಇವರು ಈ ಯೋಜನೆಗೆ ಸಂದಾಯ ಮಾಡುವ ಮೊತ್ತದ ಗರಿಷ್ಠ ಹಾಗೂ ಕನಿಷ್ಠ ಶ್ರೇಣಿ ಎಷ್ಟು; ಸರಾಸರಿ ವಾರ್ಷಿಕವಾಗಿ ಸಂಗ್ರಹವಾಗಿರುವ ಮೊತ್ತ ಎಷ್ಟು: ಹಾಗೂ ಇಲ್ಲಿಯವರೆಗೆ ಸಂಗ್ರಹವಾಗಿರುವ ಮೊತ್ತ ಎಷ್ಟು; | ಕಾ.ರಾ.ವಿ. ನಿಗಮ ಇವರ ದಿನಾಂಕ: 25.11.2025ರ ಪತ್ರದಲ್ಲಿ ತಿಳಿಸಿರುವಂತೆ ರಾಜ್ಯದಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದ ಸಂಸ್ಥೆಗಳು / ಸ್ಥಾವರಗಳು / ಘಟಕಗಳು / ಕೈಗಾರಿಕೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಒಟ್ಟು 37,30,909 ವಿಮಾದಾರರು ವಿಮಾ ಯೋಜನೆಗೆ ಒಳಪಟ್ಟಿರುತ್ತಾರೆ.<br><br>ಕಾ.ರಾ.ವಿ ಯೋಜನೆಯಡಿಯಲ್ಲಿ ಕನಿಷ್ಠ ಅಥವಾ ಗರಿಷ್ಠ ಕೊಡುಗೆ/ಸಂದಾಯದ ಮೊತ್ತದ ಮಿತಿ ಇರುವುದಿಲ್ಲ. ಆದರೆ ಮಾಸಿಕವಾಗಿ ರೂ. 21,000/- ಅಥವಾ ಅದಕ್ಕಿಂತ ಕಡಿಮೆ ವೇತನ ಪಡೆಯುವ ಉದ್ಯೋಗಿಗಳ ವೇತನದ ಒಟ್ಟು 4% ವಂತಿಕೆಯನ್ನು ಪಾವತಿಸಬೇಕು. ಇದರಲ್ಲಿ ಉದ್ಯೋಗದಾತರ ಪಾಲು 3.25% ಮತ್ತು ನೌಕರರ ಪಾಲು 0.75% ಆಗಿರುತ್ತದೆ.<br><br>ಕಳೆದ ಮೂರು ವರ್ಷಗಳಿಂದ ಸಂಗ್ರಹವಾದ ಸರಾಸರಿ ವಾರ್ಷಿಕ ಮೊತ್ತ ರೂ.2039.67 ಕೋಟಿಗಳಾಗಿರುತ್ತದೆ. |
| ಆ) | ಈ ನಿಧಿಯಿಂದ ಕಾರ್ಮಿಕರ ಆರೋಗ್ಯ ವಿಮಾ ಸೇವೆಗಳಿಗೆ ನೀಡಲು ಗರಿಷ್ಟ ಎಷ್ಟು ಮೊತ್ತದವರೆಗೆ ಬಳಸಲಾಗುತ್ತಿದೆ: ವಾರ್ಷಿಕವಾಗಿ ಈ ಯೋಜನೆಯಲ್ಲಿ ಸಂಗ್ರಹವಾಗುವ ಹಾಗೂ ಕಾರ್ಮಿಕರಿಗೆ ಆರೋಗ್ಯ ವಿಮಾ ಸೇವೆಗಳಿಗೆ ವೆಚ್ಚವಾಗುವ ಮತ್ತು ಮಿಗತೆಯಾಗುವ ಅಥವಾ ಕೊರತೆಯಾಗುವ ಮೊತ್ತವೆಷ್ಟು: ವ್ಯತ್ಯಾಸವನ್ನು ಹೇಗೆ ಹೊಂದಾಣಿಕೆ ಮಾಡಲಾಗುತ್ತಿದೆ: | 2024–25ನೇ ಹಣಕಾಸು ವರ್ಷದಲ್ಲಿ ಅರ್ಹ ಮೊತ್ತ ರೂ. 897 ಕೋಟಿಗಳಾಗಿದ್ದು, ಹಂಚಿಕೆಯಾದ ಮೊತ್ತ ರೂ.585.28 ಕೋಟಿಗಳಾಗಿರುತ್ತದೆ. ವೆಚ್ಚವಾದ ಮೊತ್ತ ರೂ.495.04 ಕೋಟಿಗಳಾಗಿದ್ದು, ಹೆಚ್ಚುವರಿ ಮೊತ್ತರೂ.90.24 ಕೋಟಿಗಳಾಗಿರುತ್ತದೆ. |

| | | |
|---|---|---|
| (ಇ) | ಸರಕಾರದಿಂದ ಕಾರ್ಮಿಕ ವಿಮಾ ಯೋಜನೆಯಡಿ ವಿವಿಧ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆಯೇ ಯಾವ ಯಾವ ಆರೋಗ್ಯ ಸೇವೆಗಳು ಈ ಯೋಜನೆಯಡಿ ಲಭ್ಯವಾಗುತ್ತಿದೆ: ಪ್ರಸ್ತುತ ಸದರಿ ಕಾರ್ಮಿಕ ವಿಮಾ ಯೋಜನೆಯ ಆಸ್ಪತ್ರೆಗಳೊಂದಿಗೆ ಒಡಂಬಡಿಕೆಯನ್ನು ಪೂರ್ಣವಾಗಿ ನವೀಕರಣ ಮಾಡದೆ ಇರಲು ಕಾರಣವೇನು: ಯಾವಾಗ ನವೀಕರಣ ಮಾಡಿ ಸದರಿ ಯೋಜನೆಯ ಉಪಯೋಗ ಸಾರ್ವಜನಿಕರಿಗೆ ಸಿಗುವಂತೆ ಮಾಡಲಾಗುವುದು; | ಹೌದು.<br><br>ವಿಮಾದಾರರಿಗೆ ಉತ್ತಮ ಚಿಕಿತ್ಸೆ ನೀಡಲು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳೊಂದಿಗೆ ಎಂಪ್ಯಾನೆಲ್/ಟೈ-ಅಪ್' ಒಪ್ಪಂದಗಳನ್ನು ಮಾಡಿಕೋಳ್ಳಲಾಗುತ್ತದೆ. ಸೆಕೆಂಡರಿ ಕೇರ್ ಚಿಕಿತ್ಸೆಗಳನ್ನು ರಾಜ್ಯ ಕಾ.ರಾ.ವಿ.ಯೋ (ವೈ) ಸೇವೆಯಿಂದ ಎಂಪ್ಯಾನೆಲ್/ಟೈ-ಅಪ್' ಮಾಡಿಕೊಂಡರೆ, ಸೂಪರ್ ಸ್ಪೆಷಾಲಿಟಿ ಚಿಕಿತ್ಯೆಗಳಿಗೆ ಕಾರಾವಿ ನಿಗಮದ ವತಿಯಿಂದ ಎಂಪ್ಯಾನೆಲ್/ಟೈ-ಅಪ್' ಮಾಡಿಕೊಳ್ಳಲಾಗುತ್ತಿದೆ. |
| (ಈ) | ಎಲ್ಲಾ ಸಾಮಾನ್ಯ ಆರೋಗ್ಯ ಸೇವೆ, ವಿಶೇಷ ಆರೋಗ್ಯ ಸೇವೆ, ಸೂಪರ್ ಸ್ಪೆಸಿಲಿಟಿ ಆರೋಗ್ಯ ಸೇವೆ ಹಾಗೂ ಇನ್ನಿತರ ಸೇವೆಗಳಿಗಾಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆಯನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸಾಮಾಜಿಕ ಭದ್ರುತಾ ಯೋಜನೆಗಳನ್ನು ಸದೃಢಗೊಳಿಸಲಾಗುವುದು? | ಸರ್ಕಾರದ ಪತ್ರ ಸಂಖ್ಯೆ: ಕಾಇ 295 ಎಲ್‌ಎಸ್‌ಐ 2024, ದಿನಾಂಕ: 11.12.2025 ರಂತೆ ಮುಂದಿನ 2 ವರ್ಷಗಳ ಅವಧಿಗೆ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ. |

**ಕಡತಸಂಖ್ಯೆ: ಕಾಇ 234 ಎಲ್‌ಸ್‌ಐ 2025.**

**(ಸಂತೋಷ್ ಲಾಡ್)**
ಕಾರ್ಮಿಕಸಚಿವರು.